## ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಡಿ.ಸಿ.ಮೋಹನ್, ಅಧ್ಯಕ್ಷರು, ಚಿಕ್ಕಜಾಜೂರ ಗ್ರಾಮ ಪಂಚಾಯತಿ, ಹೊಳಲ್ಕೆರೆ ತಾಲ್ಲೂಕು ಪಂಚಾಯತಿ, ಚಿತ್ರದುರ್ಗ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

ಓದಲಾಗಿದೆ:

1. ಮಾನ್ಯ ಉಪಲೋಕಾಯುಕ್ತರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ-7372/2014/ ಡಿಆರ್‌ಇ-1, ದಿನಾಂಕ:16-05-2017.
2. ಸರ್ಕಾರದ ಕಾರಣ ಕೇಳುವ ನೋಟೀಸ್ ದಿನಾಂಕ:23-06-2017.
3. ಶ್ರೀ ಡಿ.ಸಿ.ಮೋಹನ್, ಅಧ್ಯಕ್ಷರು ಇವರು ಸರ್ಕಾರದ ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿ: 26-07-2017, 11-09-2017 ಮತ್ತು 01-01-2018.
4. ವಿಚಾರಣೆಗೆ ಹಾಜರಾಗುವ ತಿಳುವಳಿಕೆ ಪತ್ರ ಸಂಖ್ಯೆ: ಗ್ರಾಅಪ: 515:ಗ್ರಾಪಂಕಾ:2017, ದಿನಾಂಕ: 29-08-2017 ಮತ್ತು 06-12-2017.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಶ್ರೀ ಜಿ.ಎಂ.ಲೋಕೇಶ್ ಬಿನ್ ಮಹಾದೇವಪ್ಪ, ಗಂಜಿಕಟ್ಟೆ, ಮುತ್ತಗದೂರು ಅಂಚೆ, ಬಿ.ದುರ್ಗ ಹೋಬಳಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ರವರು ದೂರು ಸಲ್ಲಿಸಿದ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

ಈ ಪ್ರಕರಣದಲ್ಲಿ ದೂರುದಾರರು ಚಿಕ್ಕಜಾಜೂರು ಗ್ರಾಮಪಂಚಾಯತಿಗೆ ದಿ:09-04-2010 ರಿಂದ 14-03-2012 ರವರೆಗೆ ಭಾರತ ನೈರ್ಮಲ್ಯ ಯೋಜನೆಯಡಿ ಅನುದಾನ ಬಿಡುಗಡೆಗೊಂಡಿದ್ದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸದೇ ಎದುರುದಾರರು ಒಟ್ಟು ರೂ.2,49,800/-ಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

ದೂರುದಾರರ ದೂರಿನ ಬಗ್ಗೆ ತನಿಖೆ ವರದಿ ಸಲ್ಲಿಸುವಂತೆ ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿತ್ರದುರ್ಗ ಇವರಿಗೆ ಆದೇಶಿಸಲಾಗಿತ್ತು. ಪೋಲಿಸ್ ಅಧೀಕ್ಷಕರು ಪೋಲಿಸ್ ನಿರೀಕ್ಷಕರ ಮೂಲಕ ತನಿಖೆ ನಡೆಸಿ ವರದಿಯನ್ನು ಸಲ್ಲಿಸಿದ್ದು, "ತನಿಖಾಧಿಕಾರಿ ಸಲ್ಲಿಸಿರುವ ವರದಿಯಲ್ಲಿ ಚಿಕ್ಕಜಾಜೂರು ಗ್ರಾಮ ಪಂಚಾಯತಿಯ ಹಿಂದಿನ ಪಿಡಿಓಗಳಾದ ಶ್ರೀ ಕೆ ಶಿವಪ್ಪ ಮತ್ತು ಶ್ರೀ ಜಿ.ವಿ.ಪರಮೇಶ್ವರಪ್ಪ, ಶ್ರೀ ಡಿ.ಸಿ.ಮೋಹನ್, ಅಧ್ಯಕ್ಷರು ಹಾಗೂ ಶ್ರೀ ಪಿ.ಎಸ್.ಮೂರ್ತಿ, ಮಾಜಿ ಅಧ್ಯಕ್ಷರು ಇವರು ಚಿಕ್ಕಜಾಜೂರು ಗ್ರಾಮ ಪಂಚಾಯತಿಯ ನಿರ್ಮಲ ಭಾರತ್ ಅಭಿಯಾನ ಯೋಜನೆಯಡಿ ಸರ್ಕಾರದಿಂದ ನೀಡಲಾದ ರೂ.2,50,000/-ಗಳ ಪ್ರೋತ್ಸಾಹಧನದ ಹಣವನ್ನು ಯಾವುದೇ ಕ್ರಿಯಾ ಯೋಜನೆಯನ್ನು ತಯಾರಿಸದೆ ಹಾಗೂ ಮೇಲಾಧಿಕಾರಿಗಳ ಪೂರ್ವಾನುಮತಿಯನ್ನು ಪಡೆಯದೆ ಕಾನೂನುಬಾಹಿರವಾಗಿ ಸದರಿ ಗ್ರಾಮ ಪಂಚಾಯತಿಯಲ್ಲಿ ಕ್ಲರ್ಕ-ಕಂ-ಕರವಸೂಲಿಗಾರ ಕರ್ತವ್ಯಕ್ಕೆ ನಿಯೋಜನೆಯಾಗಿರುವ ಶ್ರೀಕಾಂತ ಪ್ರಸಾದ ಇವರ ಹೆಸರಿಗೆ ರೂ.49,800/-ಗಳನ್ನು ಚೆಕ್ ನಂ.104115 ಮತ್ತು ರೂ.2 ಲಕ್ಷಗಳನ್ನು ಚೆಕ್ ನಂ.782671 ಪ್ರಕಾರ ನೀಡಿ ಸದರಿಯವರ ಮುಖಾಂತರ ಒಟ್ಟು ರೂ.2,49,800/-ಗಳನ್ನು ಪಡೆದುಕೊಂಡು ಕಸ ವಿಲೇವಾರಿ ಮಾಡಲು ಗುಂಡಿಗಳನ್ನು ತೋಡಿಸುವುದಕ್ಕಾಗಿ ಮತ್ತು 67 ಕಸದ ತೊಟ್ಟಿಗಳನ್ನು ಖರೀದಿಸುವ ಸಲುವಾಗಿ ಹಣವನ್ನು ಖರ್ಚು ಮಾಡಿರುವುದಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಹಣ ದುರುಪಯೋಗ ಮಾಡಿರುವ ಬಗ್ಗೆ ವಿಚಾರಣಾಧಿಕಾರಿಯವರ ವರದಿಯಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43(ಎ) ರನ್ವಯ ಕ್ರಮ ಜರುಗಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

2..

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ನೋಟೀಸಿನಲ್ಲಿ ಶ್ರೀ ಡಿ.ಸಿ.ಮೋಹನ್, ಅಧ್ಯಕ್ಷರು ಇವರಿಗೆ ಕಾರಣ ಕೇಳುವ ನೋಟೀಸು ಜಾರಿ ಮಾಡಿ ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಅವರ ಸಮಜಾಯಿಷಿ ಕೇಳಲಾಗಿತ್ತು.

ಈ ನೋಟೀಸಿಗೆ ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಸಲ್ಲಿಸಿರುವ ಸದರಿಯವರ ವಿವರಣೆಯಲ್ಲಿ ಅವರು ಈ ಹಿಂದೆ 2010ನೇ ಸಾಲಿನಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿದ್ದಾಗ ಕೇಂದ್ರ ಸರ್ಕಾರವು ನಿರ್ಮಲ ಗ್ರಾಮ ಪುರಸ್ಕಾರ ಪ್ರಶಸ್ತಿಯ ಮೊತ್ತ 2.50ಗಳನ್ನು ನೀಡಿದ್ದು, ಇದರಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯ ಶುಚಿತ್ವವನ್ನು ಕಾಪಾಡುವ ದೃಷ್ಠಿಯಿಂದ 60 ಸಿಮೆಂಟ್ ಕಸದ ತೊಟ್ಟಿಗಳನ್ನು 2.00 ಲಕ್ಷ ಅಂದಾಜು ವೆಚ್ಚದಲ್ಲಿ ಖರೀದಿಸಲು ಗ್ರಾಮ ಪಂಚಾಯತಿಯು ನಿರ್ಣಯವನ್ನು ಅಂಗೀಕರಿಸಿರುವುದನ್ನು ಪ್ರಸ್ತಾಪಿಸುತ್ತಾ ಅದರನ್ವಯ ಮೆ||ತುಂಗಭದ್ರ ಸಿಮೆಂಟ್ ಪ್ರಾಡೆಕ್ಟ್ ಸಂಸ್ಥೆಯಿಂದ ಖರೀದಿಸಿರುವುದಾಗಿ ತಿಳಿಸಿರುತ್ತಾರೆ.

ದಿನಾಂಕ:13-03-2012ರ ಗ್ರಾಮ ಪಂಚಾಯತಿ ಸಭೆಯಲ್ಲಿ ಸರ್ವ ಸದಸ್ಯರು ಚರ್ಚಿಸಿ ಸದರಿ ಅನುದಾನದ ಹಣದಲ್ಲಿ ರೂ.2,00,000-00 ಗಳಿಗೆ ಡೆಸ್ಟ್ ಬಿನ್ ಖರೀದಿ ಮಾಡುವಂತೆ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಈ ರೀತಿ ಖರೀದಿ ಮಾಡಲಾದ ಸಿಮೆಂಟ್ ತೊಟ್ಟಿಗಳನ್ನು ಸ್ಟಾಕ್ ರಜಿಸ್ಟರ್‌ನಲ್ಲಿ ತೆಗೆದುಕೊಂಡಿರುವುದಾಗಿ ತಿಳಿಸಿರುತ್ತಾರೆ. ಸಿಮೆಂಟ್ ತೊಟ್ಟಿಗಳನ್ನು ಗ್ರಾ.ಪಂ.ವ್ಯಾಪ್ತಿಯ ವಿವಿಧ ಸ್ಥಳಗಳಲ್ಲಿ ಸ್ಥಾಪಿಸಿರುವುದಾಗಿ ತಿಳಿಸಿರುತ್ತಾರೆ. 2013ನೇ ಸಾಲಿನಲ್ಲಿ ಖರೀದಿಸಲಾಗಿರುವ ಈ ಖರೀದಿಯ ವ್ಯವಹಾರದ ಬಗ್ಗೆ ಮೂರು ವರ್ಷಗಳ ನಂತರ ಪರಿವೀಕ್ಷಣೆ ನಡೆಸಲಾಗಿರುವುದರಿಂದ ಕೆಲವೊಂದು ಸಿಮೆಂಟ್ ತೊಟ್ಟಿಗಳು ದುಸ್ಥಿತಿಯಲ್ಲಿರುತ್ತವೆ. ಈ ಎಲ್ಲಾ ಸಾಧ್ಯತೆಗಳನ್ನು ಪರಿಗಣಿಸದೇ ಮಾನ್ಯ ಲೋಕಾಯುಕ್ತ ಅಧಿಕಾರಿಗಳು ಸ್ಥಳ ತಪಾಸಣೆ ಮಾಡಿ ವರದಿಯನ್ನು ನೀಡಿರುವುದು ಸೂಕ್ತವಲ್ಲವೆಂದು ವಿವರಿಸಿರುತ್ತಾರೆ.

ಅದರಂತೆ ಸಂಬಂಧಪಟ್ಟ ಏಜೆನ್ಸಿಯವರ ಹತ್ತಿರ ದರಪಟ್ಟಿ ಮತ್ತು ಬಿಲ್ ಪಡೆದು ಅತಿ ಕಡಿಮೆ ದರ ನಮೂದಿಸಿರುವ ಏಜೆನ್ಸಿಯವರಿಗೆ ಚೆಕ್ ಮೂಲಕ ಅವರಿಗೆ ಹಣ ನೀಡಲು ಪಂ.ಅ.ಅ. ರವರ ಹತ್ತಿರ ಚೆಕ್‌ಗೆ ಸಹಿ ಮಾಡಿಕೊಟ್ಟಿರುತ್ತೇನೆ. ಆದರೆ ಪಂ.ಅ.ಅ.ರವರು ನೇರವಾಗಿ ಬಿಲ್‌ಕಲೆಕ್ಟರ್ ಹೆಸರಿಗೆ ಚೆಕ್ ನೀಡಿದ್ದು, ಅವರ ಮೂಲಕ ಏಜೆನ್ಸಿಯವರಿಗೆ ಹಣ ಪಾವತಿ ಮಾಡಿರುತ್ತಾರೆ. ನನಗೆ ಈ ವಿಷಯ ತಡವಾಗಿ ತಿಳಿಯಿತು.

ನಾನು ಹೊಸದಾಗಿ ಅಧ್ಯಕ್ಷನಾಗಿ ಆಯ್ಕೆಯಾಗಿರುವುದರಿಂದ ಪಂಚಾಯತಿ ಅಧಿನಿಯಮಗಳ ತಿಳುವಳಿಕೆ ಕೊರತೆ ಇರುವುದರಿಂದ ಈ ಬಗ್ಗೆ ಪಂ.ಅ.ಅ. ರವರು ನನಗೆ ತಿಳುವಳಿಕೆ ನೀಡಬೇಕಾಗಿತ್ತು. ನಾನು ಗ್ರಾಮ ಪಂಚಾಯತಿಯಲ್ಲಿ ನಿಷ್ಠೆ ಮತ್ತು ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿಕೊಂಡು ಬಂದಿರುತ್ತೇನೆ. ಆದ್ದರಿಂದ ನನ್ನ ಮೇಲೆ ಇರುವ ಆರೋಪದಿಂದ ಮುಕ್ತಗೊಳಿಸಬೇಕೆಂದು ಮನವಿ ಮಾಡಿಕೊಂಡಿರುತ್ತಾರೆ".

ಮೇಲೆ ಓದಲಾದ ಕ್ರಮ ಸಂಖ್ಯೆ (4)ರಲ್ಲಿ ಶ್ರೀ ಡಿ.ಸಿ.ಮೋಹನ್, ಅಧ್ಯಕ್ಷರು ಇವರ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ವಿಚಾರಣೆ ಕರೆಯಲಾಗಿ ದಿನಾಂಕ:05-09-2017 ಮತ್ತು 28-12-2017 ರಂದು ಜರುಗಿದ ವಿಚಾರಣೆಯಲ್ಲಿ ಆಪಾದಿತ ಅಧ್ಯಕ್ಷರು, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಜಾಜೂರು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತಿ ಅಧಿಕಾರಿಗಳು ಹಾಜರಾಗಿರುತ್ತಾರೆ. ಅಧ್ಯಕ್ಷರು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ.

ಸರ್ಕಾರವು ಈ ಪ್ರಕರಣದಲ್ಲಿ ಲಭ್ಯವಿರುವ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ, ಈ ಪ್ರಕರಣವು ಹಿಂದಿನ ಅವಧಿಗೆ ಸಂಬಂಧಪಟ್ಟಿರುವ ಹಿನ್ನೆಲೆಯಲ್ಲಿ, ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ರಡಿ ಸದಸ್ಯನು ಪ್ರಸ್ತುತ ಅವಧಿಯಲ್ಲಿ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಾಗ ಎಸಗಿದ ದುರ್ನಡತೆಗೆ ಮಾತ್ರ ಕ್ರಮ ಕೈಗೊಳ್ಳಬಹುದಾಗಿರುವುದರಿಂದ ಸದರಿಯವರ ಸದಸ್ಯತ್ವವನ್ನು ರದ್ದುಪಡಿಸಲು ಕ್ರಮ ಇರುವುದಿಲ್ಲ. ಆದುದರಿಂದ ಸದರಿಯವರ ವಿರುದ್ಧ ಕಾನೂನಾತ್ಮಕ ಕ್ರಮ ಕೈಗೊಳ್ಳಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/515/ಗ್ರಾಪಂಕಾ/2017, ಬೆಂಗಳೂರು, ದಿನಾಂಕ:09-04-2018.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಡಿ.ಸಿ.ಮೋಹನ್, ಅಧ್ಯಕ್ಷರು, ಚಿಕ್ಕಜಾಜೂರು ಗ್ರಾ.ಪಂ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ರವರ ಪ್ರಕರಣವು ಹಿಂದಿನ ಅವಧಿಗೆ ಸಂಬಂಧಪಟ್ಟಿರುವ ಹಿನ್ನೆಲೆಯಲ್ಲಿ ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ)ರಡಿ ಸದಸ್ಯನು ಪ್ರಸ್ತುತ ಅವಧಿಯಲ್ಲಿ ತನ್ನ ಕರ್ತವ್ಯಗಳನ್ನು ನಿರ್ವಹಿಸುತ್ತಿರುವಾಗ ಎಸಗಿದ ದುರ್ನಡತೆಗೆ ಮಾತ್ರ ಕ್ರಮ ಕೈಗೊಳ್ಳಬಹುದಾಗಿರುವುದರಿಂದ ಸದರಿಯವರ ಸದಸ್ಯತ್ವವನ್ನು ರದ್ದುಪಡಿಸಲು ಕ್ರಮ ಇರುವುದಿಲ್ಲ. ಆದುದರಿಂದ ಸದರಿಯವರ ವಿರುದ್ಧ ಕಾನೂನಾತ್ಮಕ ಕ್ರಮ ಕೈಗೊಳ್ಳಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

11/4

**(ಮುಬಾರಕ್ ಅಹ್ಮದ್)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿತ್ರದುರ್ಗ, ಚಿತ್ರದುರ್ಗ ಜಿಲ್ಲೆ.
2. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹೊಳಲ್ಕೆರೆ, ಚಿತ್ರದುರ್ಗ ಜಿಲ್ಲೆ.
3. ಶ್ರೀ ಡಿ.ಸಿ.ಮೋಹನ್, ಅಧ್ಯಕ್ಷರು, ಚಿಕ್ಕಜಾಜೂರು ಗ್ರಾಮ ಪಂಚಾಯಿತಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಚಿಕ್ಕಜಾಜೂರು ಗ್ರಾಮ ಪಂಚಾಯಿತಿ, ಹೊಳಲ್ಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
6. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.